Anu : I want to taste the badam milk and coconut water.

Naana : Don't forget to try bajjeelu and punugulu too.

Amma : We all excited to taste the food varieties in the beach festival.

Naana : Yes, "Without food life cannot go on".

AP SCERT



ಪಾಠ 5 ನಾವು ತಿನ್ನುವ ಆಹಾರ




X2U1M9

ಕಲಿಕಾ ಫಲಗಳು :

ವಿದ್ಯಾರ್ಥಿಗಳು ಪಡೆದುಕೊಳ್ಳುವ ಸಾಮರ್ಥ್ಯಗಳು :

- ಎಲ್ಲಾ ಜೀವಿಗಳಿಗೆ ಆಹಾರ ಅಗತ್ಯವೆಂದು ಗುರುತಿಸುತ್ತಾರೆ.(CG-2)
- ಸಸ್ಯಗಳಿಂದ ಮತ್ತು ಪ್ರಾಣಿಗಳಿಂದ ಲಭಿಸುವ ವಿವಿಧ ಆಹಾರಗಳನ್ನು ಗುರುತಿಸುತ್ತಾರೆ. (CG-4)
- ಬೇಯಿಸದೇ ಮತ್ತು ಬೇಯಿಸಿ ತಿನ್ನುವ ಅಹಾರಗಳ ವ್ಯತ್ಯಾಸ ತಿಳಿಯವರು(CG-4)
- ಬೇರೆ ಬೇರೆ ವಯಸ್ಸಿನವರಿಗೆ ಸರಿಹೋಗುವ ಆಹಾರವನ್ನು ಗುರುತಿಸುತ್ತಾರೆ. (CG-4)
- ಉತ್ತಮ ಆಹಾರದ ಅಭ್ಯಾಸಗಳನ್ನು ಕುರಿತು ತಿಳಿಯುವರು.(CG-4)
- ವಿವಿಧ ಪ್ರಕಾರಗಳ ಆಹಾರಗಳನ್ನು ಗುರುತಿಸುವರು. (CG-4)



ಅನು : ಅಪ್ಪಾ! ಮುಂದಿನ ಎರಡನೇ ಶನಿವಾರ ನಾವು ಯಾವುದಾದರೂ ವಿಹಾರ ಯಾತ್ರೆಗೆ ಹೋಗೋಣವೇ?

ಅಪ್ಪ : ಸರಿ, ನಾವು ಬಾಪಟ್ಲ ಬೀಚ್ ಹಬ್ಬಕ್ಕೆ ಹೋಗೋಣ.

ಅನು : ಓ! ಬಹಳ ಚೆನ್ನಾಗಿರುತ್ತದೆ. ಸೂರ್ಯೋದಯ ಮತ್ತು ಸೂರ್ಯಾಸ್ತಮಯ ಸಮಯದಲ್ಲಿ ಬೀಚ್ ನೋಡುವುದಕ್ಕೆ ಅದ್ಭುತವಾಗಿರುತ್ತದೆಂದು ನಾನು ಕೇಳಿದ್ದೇನೆ.

ಅಮ್ಮ : ಹೌದು, ಆ ಜಾತ್ರೆಯಲ್ಲಿ ಗೊಂಬೆಗಳು, ಕರಕುಶಲ ಮತ್ತು ಆಹಾರ ಪದಾರ್ಥಗಳಿಗೆ ಸಂಬಂಧಿಸಿದ ಬಹಳ ಮಳಿಗೆಗಳು ಇರುತ್ತವೆ.

ಕಿರಣ : ನಿಂಬೆಹಣ್ಣು ಮತ್ತು ಈರುಳ್ಳಿಯಿಂದ ಮಾಡಿದ ಸೀಗಡಿ ಪಲ್ಲೆ ತಿನ್ನುವುದಕ್ಕೆ ನಾನು ಬಹಳ ಉತ್ಸುಕನಾಗಿ ಎದುರು ನೋಡುತ್ತಿರುತ್ತೇನೆ.

ಅಪ್ಪ : ನಾನು ಆ ಆಂಧ್ರ ಸ್ಟೈಲ್ ಮಸಾಲ ಮೀನಿನ ಪದಾರ್ಥವನ್ನು ಅನ್ನದ ಜೊತೆ ರುಚಿ ನೋಡುತ್ತೇನೆ.

ಅನು : ನಾನು ಬಾದಂ ಹಾಲು ಮತ್ತು ತೆಂಗಿನ ನೀರು ಕುಡಿಯಬೇಕೆನ್ನಿಸುತ್ತದೆ.

ಅಪ್ಪಾ : ಅಲ್ಲಿಯ ವಡೆಗಳ ರುಚಿ ನೋಡುವುದನ್ನು ಮರೆಯಬಾರದು.


ಅಮ್ಮ : ನಾವೆಲ್ಲರೂ ಬೀಚ್ ಹಬ್ಬದಲ್ಲಿನ ವಿವಿಧ ಪ್ರಕಾರಗಳ ಆಹಾರ ಪದಾರ್ಥಗಳನ್ನು ರುಚಿ ನೋಡುವುದಕ್ಕೆ ಬಹಳ ಉತ್ಸಾಹದಿಂದ ಇದ್ದೇವೆ ಅಲ್ವಾ!

ಅಪ್ಪ : ಹೌದು, ಆಹಾರ ಇಲ್ಲದೇ ಜೀವನ ಸಾಗುವುದಿಲ್ಲ.

AP SCERT

Food :

The Food helps us live and grow. It gives us energy. It keeps us healthy and strong.



Food from plants :

We eat different parts of plants as food. We eat leaves of some plants, stems, flowers, fruits, seeds and also the roots. Rice is the main food item in our diet. It is produced from paddy. Wheat, and millets are the other food grains that we eat. We eat food grains other than paddy like pearl millet (sajjalu), little millet (samalu), finger millet (raagulu) and Italian millet (korralu).

Look at the following edible part of the plants.



Paddy



Wheat



Pearl millet

Some plants give us food from the roots like carrot, beetroot and radish.



Carrot



Beetroot



Radish



Let Us Know !


We get jaggery and sugar from sugarcane.



APSCERT

ಆಹಾರ :

ಆಹಾರ ನಾವು ಜೀವಿಸುವುದಕ್ಕೆ ಮತ್ತು ಬೆಳೆಯುವುದಕ್ಕೆ ಸಹಾಯ ಮಾಡುತ್ತದೆ. ಇದು ನಮಗೆ ಶಕ್ತಿಯನ್ನು ಕೊಡುತ್ತದೆ ಇದು ನಮಗೆ ಆರೋಗ್ಯವಾಗಿ ಮತ್ತು ಸದೃಢವಾಗಿ ಇರಿಸುತ್ತದೆ.



ಸಸ್ಯಗಳಿಂದ ಲಭಿಸುವ ಆಹಾರ

ಗಿಡಗಳ ವಿವಿಧ ಭಾಗಗಳನ್ನು ನಾವು ಆಹಾರವಾಗಿ ತೆಗೆದುಕೊಳ್ಳುತ್ತೇವೆ. ಕೆಲವು ಸಸ್ಯಗಳ ಎಲೆಗಳು, ಕಾಂಡ, ಹೂ, ಹಣ್ಣು, ಬೀಜ ಮತ್ತು ಬೇರುಗಳನ್ನು ನಾವು ತಿನ್ನುತ್ತೇವೆ. ನಮ್ಮ ಆಹಾರಗಳಲ್ಲಿ ಅನ್ನ ಪ್ರಧಾನವಾದುದು. ಇದು ಭತ್ತದ ಬೆಳೆಯಿಂದ ಸಿಗುತ್ತದೆ. ನಾವು ತಿನ್ನುವ ಆಹಾರ ಧಾನ್ಯಗಳಲ್ಲಿ ಜೋಳ, ಗೋಧಿ ಮುಖ್ಯವಾಗಿವೆ. ನಾವು ಭತ್ತ ಮಾತ್ರವಲ್ಲದೆ ಸಜ್ಜೆ, ರಾಗಿ, ನವಣೆ, ಹುರುಳಿ, ಮೊದಲಾದ ಧಾನ್ಯಗಳನ್ನು ಆಹಾರವಾಗಿ ತಿನ್ನುತ್ತೇವೆ.

ಸಸ್ಯಗಳಲ್ಲಿ ನಾವು ತಿನ್ನಬಹುದಾದ ಭಾಗಗಳನ್ನು ವೀಕ್ಷಿಸೋಣ.



ಭತ್ತ ಗೋಧಿ ಸಜ್ಜೆ

ಕ್ಯಾರೆಟ್, ಬೀಟ್‌ರೂಟ್, ಮುಲ್ಲಂಗಿಯಂತಹ ಗಿಡಗಳ ಬೇರುಗಳನ್ನು ಆಹಾರವಾಗಿ ತೆಗೆದುಕೊಳ್ಳುತ್ತೇವೆ.



ಕ್ಯಾರೆಟ್ ಬೀಟ್‌ರೂಟ್ ಮುಲ್ಲಂಗಿ

ನಿಮಗಿದು ಗೊತ್ತೇ !

ನಮಗೆ ಕಬ್ಬಿನಿಂದ ಸಕ್ಕರೆ, ಬೆಲ್ಲ ಸಿಗುತ್ತದೆ.



AP SCERT



The most **nutrient** part of the plant is a leaf.
We eat different types of leaves.

Food from leaves :

Is cabbage a flower? or a leaf? Ask your teacher.



Amaranthus



Drumstick leaves



Spinach



Curry leaves

We eat the flowers of banana and cauliflower. Cloves (lavanga) are the flavoured dry buds used as condiments. Saffron flowers are used in making special food items.



Banana flower



Cauliflower



Cloves

We love to eat the fruits like mango, orange, jackfruit, papaya, apple, banana, grapes, muskmelon and watermelon. Do all fruits taste sweet? We must eat all fruits. They give us good health.




Mango



Orange



Apple



Banana

Which fruit do you like most?

Amazing Facts

Mushroom is a fungi which has many nutrients.



© NCERT not to be republished



ಸಸ್ಯಗಳಲ್ಲಿ ಅತ್ಯಧಿಕ **ಪೋಷಕಾಂಶಗಳು** ಇರುವ ಭಾಗವೇ ಎಲೆಗಳು. ನಾವು ವಿವಿಧ ಎಲೆಗಳನ್ನು ತಿನ್ನುತ್ತೇವೆ.

ಸೊಪ್ಪು ತರಕಾರಿಗಳಿಂದ ಲಭಿಸುವ ಆಹಾರ :

ಕೋಸು ಒಂದು ಹೂ ಅಥವಾ ಸೊಪ್ಪೇ? ನಿಮ್ಮ ಶಿಕ್ಷಕರನ್ನು ಕೇಳಿ ತಿಳಿಯಿರಿ.



ರಾಜಗಿರಿ ಸೊಪ್ಪು



ನುಗ್ಗೆ ಸೊಪ್ಪು



ಪಾಲಕ್ ಸೊಪ್ಪು



ಕರಿಬೇವು

ನಾವು ಬಾಳೆ ಹೂ, ಹೂಕೋಸು ಹೂವುಗಳನ್ನು ಆಹಾರವಾಗಿ ತಿನ್ನುತ್ತೇವೆ. ಲವಂಗಗಳಲ್ಲಿನ ಮೊಗ್ಗುಗಳು ರುಚಿಯಾಗಿ ಇರುವುದರಿಂದ ಮಸಾಲೆಗಳಾಗಿ ಬಳಸುತ್ತಾರೆ. ಕುಂಕುಮ ಹೂಗಳನ್ನು ವಿಶೇಷ ಆಹಾರ ಪದಾರ್ಥಗಳನ್ನು ತಯಾರಿಸಲು ಬಳಸುತ್ತಾರೆ.



ಬಾಳೆ ಹೂ



ಹೂಕೋಸು




ಲವಂಗಗಳು

ನಾವು ಮಾವು, ಕಿತ್ತಳೆ, ಪೇರಲ, ಪರಂಗಿ, ಸೇಬುಹಣ್ಣು, ಬಾಳೆಹಣ್ಣು, ದ್ರಾಕ್ಷಿ, ಕರ್ಜೂರ, ಕಲ್ಲಂಗಡಿ ಮುಂತಾದ ಹಣ್ಣುಗಳನ್ನು ಬಹಳ ಇಷ್ಟವಾಗಿ ತಿನ್ನುತ್ತೇವೆ. ಎಲ್ಲಾ ಹಣ್ಣುಗಳು ಸಿಹಿಯಾಗಿವೆಯೇ? ನಾವು ಎಲ್ಲಾ ರೀತಿಯ ಹಣ್ಣುಗಳನ್ನು ಸೇವಿಸಬೇಕು. ಅವುಗಳಿಂದ ನಮಗೆ ಒಳ್ಳೆಯ ಆರೋಗ್ಯ ಲಭಿಸುತ್ತದೆ.




ಮಾವಿನಹಣ್ಣು



ಕಿತ್ತಳೆ



ಸೇಬು



ಬಾಳೆಹಣ್ಣು.

ನಿಮಗೆ ಯಾವ ಹಣ್ಣು ಅಂದರೆ ಹೆಚ್ಚು ಇಷ್ಟ?

ಅದ್ಭುತವಾದ ನಿಜಾಂಶಗಳು

ಅಣಬೆ ಒಂದು ಶಿಲೀಂಧ್ರ, ಇದು ಅನೇಕ ಪೋಷಕಾಂಶಗಳನ್ನು ಹೊಂದಿರುತ್ತದೆ.



ARSCERT

Tomato and cucumber are also fruits, but we consider these as vegetables.



Tomato



Cucumber (Keera)



Which part of this fruit do we eat?

.....



Let us know where cooking oil comes from.

We can get oil from the seeds of groundnut, sesame, mustard, sunflower and olive. Cashew, peas, cowpeas and groundnuts are seeds that we eat.



Cashew



Peas



Cowpeas



Groundnuts

Pulses like red gram, green gram, black gram and cereals like paddy, wheat are all seeds. These seeds are used in cooking.

Food from animals :

We get many types of food from animals. We eat eggs and meat as our food. We drink milk. Cows, goats, buffaloes give us milk. We get different products from milk like curd, ghee, butter, cheese etc.

Observe the food items in your home. Identify and write any four items that are prepared using milk.

1) .....

2) .....

3) .....

AP SCERT

ಟೊಮೋಟೋ ಮತ್ತು ಸೌತೆಕಾಯಿ ಇವು ಸಹ ಹಣ್ಣುಗಳೇ ಆದರೆ ಇವುಗಳನ್ನು ನಾವು ತರಕಾರಿಗಳಾಗಿ ಉಪಯೋಗಿಸುತ್ತೇವೆ.



ಟೊಮೋಟೋ



ಸೌತೆಕಾಯಿ



ಈ ಹಣ್ಣುಗಳಲ್ಲಿ ಯಾವ ಭಾಗವನ್ನು ನಾವು ತಿನ್ನುತ್ತೇವೆ?

.....




ಅಡುಗೆ ಎಣ್ಣೆ ನಮಗೆ ಎಲ್ಲಿಂದ ಸಿಗುತ್ತಿದೆ ನಿಮಗೆ ಗೊತ್ತೇ?

ಶೇಂಗಾ, ಎಳ್ಳು, ಸಾಸಿವೆ, ಸೂರ್ಯಕಾಂತಿ, ಆಲಿವ್ ಮುಂತಾದ ಬೀಜಗಳಿಂದ ನಾವು ಅಡುಗೆ ಎಣ್ಣೆಯನ್ನು ತಯಾರಿಸುತ್ತಾರೆ. ಗೋಡಂಬಿ, ಬಟಾಣಿ, ಹಸಿ ಬಟಾಣಿಗಳು, ರಾಜ್ಮಾ ಬೀನ್ಸ್‌ಗಳು/ಕೆಂಪು ಕಿಡ್ನಿ ಬೀನ್ಸ್, ಶೇಂಗಾ ಮೊದಲಾದ ಬೀಜಗಳನ್ನು ನಾವು ತಿನ್ನುತ್ತೇವೆ.



ಗೋಡಂಬಿ



ಬಟಾಣಿ



ಹಲಸಂದಿ



ಶೇಂಗಾ

ತೊಗರಿ, ಹೆಸರು, ಹುರುಳಿ ಮೊದಲಾದ ಕಾಳು ಧಾನ್ಯಗಳು ಮತ್ತು ಅಕ್ಕಿ ಗೋಧಿಗಳನ್ನು ಅಡುಗೆಯಲ್ಲಿ ಉಪಯೋಗಿಸುತ್ತಾರೆ.

ಪ್ರಾಣಿಗಳಿಂದ ಲಭಿಸುವ ಆಹಾರ :

ನಮಗೆ ಪ್ರಾಣಿಗಳಿಂದ ಬಹಳ ವಿಧವಾದ ಆಹಾರ ಲಭಿಸುತ್ತದೆ. ಮೊಟ್ಟೆ, ಮಾಂಸವನ್ನು ಆಹಾರವಾಗಿ ತೆಗೆದುಕೊಳ್ಳುತ್ತೇವೆ. ಹಾಲು ಕುಡಿಯುತ್ತೇವೆ. ಆಕಳು, ಮೇಕೆ, ಎಮ್ಮೆಗಳು ನಮಗೆ ಹಾಲು ಕೊಡುತ್ತವೆ. ಹಾಲಿನಿಂದ ನಮಗೆ ಮೊಸರು, ಬೆಣ್ಣೆ, ತುಪ್ಪ, ಗಿಣ್ಣು ಮೊದಲಾದ ಆಹಾರ ಪದಾರ್ಥಗಳು ಸಿಗುತ್ತವೆ.


ನಿಮ್ಮ ಮನೆಯಲ್ಲಿ ತಯಾರಿಸುವ ಆಹಾರ ಪದಾರ್ಥಗಳನ್ನು ಗಮನಿಸಿರಿ. ಅವುಗಳಲ್ಲಿ ಹಾಲಿನಿಂದ ತಯಾರು ಮಾಡುವ ಯಾವುದಾದರೂ ನಾಲ್ಕು ಅಡುಗೆಯ ಹೆಸರು ಬರೆಯಿರಿ.

1) .....

2) .....

3) .....

APSCERT






We rear some birds like ducks and hens for eggs and meat.



Can you name any food item prepared with egg?



People rear sheep, goat, hen etc. Some eat the meat of these animals.



People also eat sea animals like fish, prawns, crabs and snails in food.




AP SCERT

Amazing Facts

In some countries like India, France, China and Nigeria some people eat snails as a special dish. It is rich in protein, low in fat and contains vitamins.









ನಾವು ಮಾಂಸ, ಮೊಟ್ಟೆಗಳಿಗಾಗಿ ಕೋಳಿ ಮತ್ತು ಬಾತುಕೋಳಿಗಳಂತಹ ಕೆಲವು ಪಕ್ಷಿಗಳನ್ನು ಬೆಳೆಸುತ್ತೇವೆ.



ಮೊಟ್ಟೆಯಿಂದ ತಯಾರಿಸಿದ ಆಹಾರ ಪದಾರ್ಥದ ಹೆಸರನ್ನು ನೀವು ಹೇಳಬಲ್ಲಿರಾ?





ಜನರು ಮೇಕೆಗಳು, ಕುರಿಗಳು, ಕೋಳಿ ಮೊದಲಾದವುಗಳನ್ನು ಸಾಕುತ್ತಾರೆ. ಕೆಲವರು ಇವುಗಳ ಮಾಂಸವನ್ನು ತಿನ್ನುತ್ತಾರೆ.





ಹಾಗೆಯೇ ಮೀನು, ಏಡಿ, ಸೀಗಡಿ, ಬಸವನಹುಳುಗಳಂತಹ ಸಮುದ್ರ ಜೀವಿಗಳನ್ನು ಆಹಾರವಾಗಿ ತಿನ್ನುತ್ತಾರೆ.







APSCERT

ಅದ್ಭುತವಾದ ನಿಜಾಂಶಗಳು

ಭಾರತ, ಫ್ರಾನ್ಸ್, ಚೈನಾ ಮತ್ತು ನೈಜೀರಿಯಾಗಳಂತಹ ಕೆಲವು ದೇಶಗಳಲ್ಲಿ ಕೆಲವು ಜನರು ಬಸವನಹುಳುಗಳನ್ನು ಪ್ರತ್ಯೇಕ ಅಡುಗೆಯಾಗಿ ತಿನ್ನುತ್ತಾರೆ. ಇದು ಪ್ರೋಟೀನ್ ಸಮೃದ್ಧಿಯಾಗಿದ್ದು, ಕೊಬ್ಬು ಕಡಿಮೆಯಾಗಿರುವುದು ಅಲ್ಲದೇ ವಿಟಮಿನ್‌ಗಳು ಸಹ ಹೊಂದಿರುತ್ತವೆ.



How do you help your mother in household work?

John helps his mother to chop or cut vegetables. While cutting, he eats them directly.

Cooked Food - Raw Food :



Which vegetables can we eat directly?

Can we eat brinjal without cooking?

We cannot eat rice, meat etc. without cooking. We can eat some vegetables without cooking. For example: carrot, onion, cucumber (kheera) etc.

Write some food items that can be eaten after cooking and that can be eaten raw.

Cooked					
Raw					

Healthy food and Junk food :

Healthy food like fruits, vegetables, milk, eggs, and grains helps us stay strong and fit. Junk food can make us weak and lazy, so we should avoid it. Eating healthy food at the right time keeps us active and happy.



Let us Do

Draw a green box for healthy food and red box for junk food in this table.

Food item	Healthy food	Junk food
Fruits		
Potato chips		
Cool drinks		
Pani puri		
Sweet potato		

AP SCERT

ನಿಮ್ಮ ತಾಯಿಗೆ ಮನೆಕೆಲಸದಲ್ಲಿ ನೀನು ಹೇಗೆ ಸಹಾಯ ಮಾಡುವೆ?

ಜಾನ್ ತನ್ನ ತಾಯಿಗೆ ತರಕಾರಿಗಳನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸುವುದರಲ್ಲಿ ಸಹಾಯ ಮಾಡುತ್ತಾನೆ. ಆ ತುಂಡುಗಳನ್ನು ಜಾನ್ ನೇರವಾಗಿ ತಿನ್ನುತ್ತಾನೆ.

ಬೇಯಿಸಿ ತಿನ್ನುವ ಆಹಾರ ಪದಾರ್ಥಗಳು – ಬೇಯಿಸದೇ ತಿನ್ನುವ ಆಹಾರ ಪದಾರ್ಥಗಳು



ನಾವು ಯಾವ ತರಕಾರಿಗಳನ್ನು ನೇರವಾಗಿ ತಿನ್ನಬಹುದು?

ಬದನೆಕಾಯಿಯನ್ನು ಬೇಯಿಸದೇ ತಿನ್ನಲು ಸಾಧ್ಯವೇ?

ನಾವು ಅಕ್ಕಿ, ಮಾಂಸಗಳನ್ನು ಬೇಯಿಸದೇ ತಿನ್ನಲು ಬರುವುದಿಲ್ಲ. ಕೆಲವು ತರಕಾರಿಗಳನ್ನು ಬೇಯಿಸದೇ ತಿನ್ನಬಹುದು. ಉದಾ: ಕ್ಯಾರೆಟ್, ಈರುಳ್ಳಿ, ಸೌತೆಕಾಯಿ, ಕೆಲವು ಬೇಯಿಸಿ ತಿನ್ನುವ, ಬೇಯಿಸದೇ ನೇರವಾಗಿ ತಿನ್ನುವ ಆಹಾರ ಪದಾರ್ಥಗಳನ್ನು ಬರೆಯಿಸಿ.

ಬೇಯಿಸಿದವು					
ಬೇಯಿಸದೇ ನೇರವಾಗಿ ತಿನ್ನುವವು					

ಆರೋಗ್ಯಕರವಾದ ಆಹಾರ ಮತ್ತು ಜಂಕ್‌ಫುಡ್:

ಹಣ್ಣುಗಳು, ತರಕಾರಿಗಳು, ಹಾಲು, ಮೊಟ್ಟೆ, ಮತ್ತು ಕಾಳುಗಳಂತಹ ಆರೋಗ್ಯಕರವಾದ ಆಹಾರ ನಮ್ಮನ್ನು ಬಲವಾಗಿ ಮತ್ತು ಆರೋಗ್ಯವಾಗಿರಿಸುತ್ತದೆ. ಅಸ್ವಾಸ್ಥ್ಯ ಆಹಾರ (ಜಂಕ್‌ಫುಡ್) ನಮ್ಮನ್ನು ಬಲಹೀನವಾಗಿ ಮತ್ತು ಅನಾರೋಗ್ಯವಾಗಿ ಬದಲಾಯಿಸುತ್ತದೆ. ಆದ್ದರಿಂದ ಅದನ್ನು ತಿನ್ನಬಾರದು. ಸರಿಯಾದ ಸಮಯದಲ್ಲಿ ಆರೋಗ್ಯಕರವಾದ ಆಹಾರವನ್ನು ತೆಗೆದುಕೊಳ್ಳುವುದರಿಂದ ನಾವು ಚುರುಕಾಗಿ ಮತ್ತು ಸಂತೋಷವಾಗಿ ಇರುತ್ತೇವೆ.

ನಾವು ಮಾಡೋಣ

ಈ ಕೆಳಗಿನ ಕೋಷ್ಟಕದಲ್ಲಿ ಆರೋಗ್ಯಕರವಾದ ಆಹಾರವನ್ನು ಹಸಿರು ಡಬ್ಬಿಯಿಂದ, ಅಸ್ವಾಸ್ಥ್ಯ ಆಹಾರನ್ನು ಕೆಂಪು ಡಬ್ಬಿಯಿಂದ ಸೂಚಿಸಿರಿ.

ಆಹಾರ ಪದಾರ್ಥ	ಆರೋಗ್ಯಕರ ಆಹಾರ	ಅಸ್ವಾಸ್ಥ್ಯ ಆಹಾರ
ಹಣ್ಣುಗಳು		
ಆಲೂಗಡ್ಡೆ ಚಿಪ್ಸ್		
ತಣ್ಣನೆಯ ಪಾನೀಯಗಳು		
ಪಾನಿಪುರಿ		
ಗೆಣಸು		

AP SCERT

Good food habits :

Good food habits help us stay strong, healthy, and active. We should eat fresh and clean food every day. Eating fruits, vegetables, milk, and grains keeps our body fit. We should drink plenty of water and avoid junk food like chips and soft drinks. Eating at the right time and chewing food properly are also good habits. We should never waste food and always wash our hands before and after eating.

Activity :

Tick (✓) the good food habits you have:

1. I wash my hands before and after having meal. ( )
2. I chew the food well and eat slowly. ( )
3. I do not leave food in my plate, at home and in school. ( )
4. I eat all the vegetables in the sambar. ( )
5. I eat curry leaves and coriander in the curries. ( )
6. I sit properly while eating and do not spill food from plate. ( )
7. I wash the fruits and vegetables before eating or cooking. ( )

Varieties of food :

Our state, Andhra Pradesh is known for it's spicy and delicious food. It is colourful and full of flavour. People here eat rice as the main food along with many tasty curries and pickles. Pulihora (tamarind rice), pappu (dhal), sambar, and rasam are common dishes. Gongura pachadi made from sour leaves is very famous in Andhra. The Coastal Andhra Pradesh is famous for seafood where as the Rayalaseema for food with millets. During festivals, people prepare special sweets like pootharekulu and bobbatlu.

Activity :

Ugadi, Vinayaka chavithi, Christmas, Sankranthi, Ramzan

AP SCERT

ಉತ್ತಮ ಆಹಾರದ ಅಭ್ಯಾಸಗಳು :

ಉತ್ತಮ ಆಹಾರದ ಅಭ್ಯಾಸಗಳು ನಮ್ಮನ್ನು ಬಲವಾಗಿ, ಆರೋಗ್ಯವಾಗಿ ಮತ್ತು ಚುರುಕಾಗಿ ಇರಿಸುತ್ತವೆ. ನಾವು ಪ್ರತಿದಿನ ತಾಜಾ ಮತ್ತು ಶುಭ್ರವಾದ ಆಹಾರವನ್ನು ತಿನ್ನಬೇಕು. ಹಣ್ಣುಗಳು, ತರಕಾರಿಗಳು, ಹಾಲು ಮತ್ತು ಕಾಳುಗಳನ್ನು ತಿನ್ನುವುದರಿಂದ ನಮ್ಮ ಶರೀರ ಆರೋಗ್ಯವಾಗಿ ಇರುತ್ತದೆ. ನಾವು ನೀರು ಹೆಚ್ಚಾಗಿ ಕುಡಿಯಬೇಕು ಮತ್ತು ಚಿಪ್ಸ್, ತಂಪಾದ ಪಾನೀಯಗಳಂತಹ ಅಸ್ವಾಸ್ಥ್ಯ ಆಹಾರವನ್ನು ದೂರ ಮಾಡಬೇಕು. ಸರಿಯಾದ ಸಮಯದಲ್ಲಿ ಊಟ ಮಾಡುವುದು ಮತ್ತು ಆಹಾರವನ್ನು ಚೆನ್ನಾಗಿ ಅಗೆಯುವುದು ಸಹ ಉತ್ತಮ ಅಭ್ಯಾಸ. ನಾವು ಯಾವಾಗಲೂ ಆಹಾರವನ್ನು ವ್ಯರ್ಥ ಮಾಡಬಾರದು ಮತ್ತು ಊಟದ ಮುಂಚೆ ಮತ್ತು ನಂತರ ಕೈಗಳನ್ನು ತಪ್ಪದೆ ತೊಳೆಯಬೇಕು.

ಚಟುವಟಿಕೆ :

ನಿಮಗೆ ಇರುವ ಉತ್ತಮ ಆಹಾರದ ಅಭ್ಯಾಸಗಳ ಮುಂದೆ (✓) ಗುರುತಿಸಿ.

1. ಊಟದ ಮೊದಲು ಮತ್ತು ನಂತರ ನನ್ನ ಕೈಗಳನ್ನು ತೊಳೆದುಕೊಳ್ಳುತ್ತೇನೆ. ( )
2. ಆಹಾರವನ್ನು ನಿಧಾನವಾಗಿ ಅಗಿಯುತ್ತಾ ತಿನ್ನುತ್ತೇನೆ. ( )
3. ಮನೆ ಮತ್ತು ಶಾಲೆಯಲ್ಲಿ ಊಟಮಾಡುವಾಗ ತಟ್ಟೆಯಲ್ಲಿ ಆಹಾರ ಬಿಡುವುದಿಲ್ಲ. ( )
4. ಸಾಂಬಾರ್‌ನಲ್ಲಿರುವ ಎಲ್ಲಾ ತರಕಾರಿಗಳನ್ನು ತಿನ್ನುತ್ತೇನೆ. ( )
5. ತರಕಾರಿಯಲ್ಲಿ ಹಾಕಿರುವ ಕರಿಬೇವು, ಕೊತ್ತಂಬರಿ ಸೊಪ್ಪುಗಳನ್ನು ತಿನ್ನುತ್ತೇವೆ. ( )
6. ಊಟ ಮಾಡುವಾಗ ಸರಿಯಾಗಿ ಕುಳಿತು ಮತ್ತು ತಟ್ಟೆಯ ಸುತ್ತ ಚೆಲ್ಲದಂತೆ ಊಟ ಮಾಡುತ್ತೇನೆ. ( )
7. ತಿನ್ನುವ, ಬೇಯಿಸುವ ಮೊದಲು ತರಕಾರಿಗಳನ್ನು ಸ್ವಚ್ಛವಾಗಿ ನೀರಿನಿಂದ ತೊಳೆಯುತ್ತೇನೆ. ( )

ವಿಧ ವಿಧವಾದ ಆಹಾರ :

ನಮ್ಮ ರಾಜ್ಯಆಂಧ್ರಪ್ರದೇಶ್ ಮಸಾಲೆಯಿಂದ ಕೂಡಿದ ರುಚಿಯಾದ ಆಹಾರಕ್ಕೆ ಪ್ರಸಿದ್ಧಿ ಹೊಂದಿದೆ. ಇಲ್ಲಿಯ ಆಹಾರ ವಿಧವಿಧವಾದ ಬಣ್ಣಗಳಿಂದ, ಪಾಸನೆಯಿಂದ ತುಂಬಿರುತ್ತದೆ. ಇಲ್ಲಿಯ ಜನರು ಅನ್ನ ಮುಖ್ಯ ಆಹಾರವಾಗಿ, ಬಹಳ ರುಚಿಯಾದ ಪಲ್ಯಗಳಿಂದ ಊಟ ಮಾಡುತ್ತಾರೆ. ಪುಳಿಯೋಗರೆ, ಪಲ್ಯ, ಸಾಂಬಾರ್ ಮತ್ತು ರಸಂ ಸಾಧಾರಣವಾಗಿ ತಿನ್ನುವ ಅಡುಗೆಗಳು. ಪುಂಡೆಪಲ್ಯ ಚಟ್ನಿ ಇಲ್ಲಿ ಬಹಳ ಪ್ರಸಿದ್ಧಿ ಹೊಂದಿದೆ. ಆಂಧ್ರಪ್ರದೇಶ ತೀರ ಪ್ರಾಂತವು ಸಮುದ್ರ ಆಹಾರಕ್ಕೆ ಪ್ರಸಿದ್ಧಿಯಾದರೆ, ರಾಯಲಸೀಮ ಪ್ರಾಂತ ಸಿರಿಧಾನ್ಯಗಳಿಂದ (ಮಿಲೆಟ್ಸ್) ಮಾಡಿದ ಆಹಾರಕ್ಕೆ ಪ್ರಸಿದ್ಧಿಯಾಗಿದೆ. ಹಬ್ಬಗಳ ಸಮಯದಲ್ಲಿ ಪೂತರೇಕುಗಳು, ಹೋಳಿಗೆಗಳಂತಹ ಪ್ರತ್ಯೇಕವಾದ ಸಿಹಿ ಅಡುಗೆಗಳನ್ನು ಜನರು ತಯಾರಿಸುತ್ತಾರೆ.

ಚಟುವಟಿಕೆ :

ಯುಗಾದಿ, ಗೌರಿ ಹಬ್ಬ, ವಿನಾಯಕ ಚೌತಿ, ಕ್ರಿಸ್‌ಮಸ್, ಸಂಕ್ರಾಂತಿ, ದೀಪಾವಳಿ, ರಂಜಾನ್.

AP SCERT

Write the name of the food with the festival from the given list.

..... 

..... 

..... 

..... 

..... 

APSCERT

Let us Do

Preparing Lemon Juice :



During summer most of us prefer to drink cool drinks, but they are harmful to our bodies. Instead, we can drink fruit juices like lemon juice. It keeps us cool and healthy.

Do you know how lemon juice is prepared?

1. Wash a lemon with clean water.
2. Cut the lemon into two halves. (Ask elders to cut lemon with the knife)

ಕೊಟ್ಟಿರುವ ಆಹಾರದ ಮುಂದೆ ಸಂಬಂಧಿಸಿದ ಹಬ್ಬದ ಹೆಸರು ಬರೆಯಿರಿ.

..... 

..... 

..... 

..... 

..... 

ನಾವು ಮಾಡೋಣ

ನಿಂಬೆರಸ ತಯಾರು ಮಾಡುವುದು :



ಬೇಸಿಗೆ ಕಾಲದಲ್ಲಿ ನಮ್ಮಲ್ಲಿ ಬಹಳ ಜನರು ತಂಪು ಪಾನೀಯಗಳನ್ನು ಕುಡಿಯುವುದಕ್ಕೆ ಇಷ್ಟಪಡುತ್ತಾರೆ. ಆದರೆ ಅವು ನಮ್ಮ ದೇಹಕ್ಕೆ ಹಾನಿಕರ, ಅವುಗಳ ಬದಲು ನಿಂಬೆರಸ ಅಂತಹ ಹಣ್ಣುಗಳ ರಸವನ್ನು ಕುಡಿಯಬಹುದು. ನಿಂಬೆರಸ ನಮ್ಮ ದೇಹವನ್ನು ತಂಪಾಗಿ ಮತ್ತು ಆರೋಗ್ಯಕರವಾಗಿ ಇರಿಸುತ್ತದೆ. ನಿಂಬೆರಸ ಹೇಗೆ ತಯಾರು ಮಾಡುತ್ತಾರೋ ನಿಮಗೆ ಗೊತ್ತಾ?

1. ನಿಂಬೆ ಹಣ್ಣನ್ನು ಸ್ವಚ್ಛ ನೀರಿನಿಂದ ಚೆನ್ನಾಗಿ ತೊಳೆಯಬೇಕು.
2. ನಿಂಬೆಹಣ್ಣನ್ನು ಎರಡು ಭಾಗಗಳಾಗಿ ಕತ್ತರಿಸಬೇಕು (ಚಾಕುವಿನಿಂದ ಕೊಯ್ಯುವುದಕ್ಕೆ ದೊಡ್ಡವರ ಸಹಾಯ ತೆಗೆದುಕೊಳ್ಳಬೇಕು)

APSCERT

3. Hold one half over a glass and squeeze gently to get the juice.
4. Remove any seeds that fall in.
5. Add some more water, a little sugar and a pinch of salt.
6. Stir it well with a spoon until the sugar is mixed properly.

Now , the fresh lemon juice is ready to drink.

Food for different age groups :

Some people need special kinds of food. Because, their body needs extra care. These groups include small children, and old people also.

In infants teeth are absent. Hence they are unable to chew the food. So, they are given either milk or soft food. People who are old lose their teeth and cannot chew. They too eat soft food. So, food habits change according to age.


Activity :

Ask your elders and fill in the table.

Age	What they can eat	What they cannot eat
2 Years old 20 Years old 80 Years old		

Amazing Facts

The food we eat every day does not come to our plate directly. It goes through many places before it reaches us. Generally plant based foods are grown on farms. Eggs are produced at poultry farms, milk and milk products are produced at diary farms. These are all are transported to shops where people buy them.





AP SCERT

3. ಒಂದು ಭಾಗವನ್ನು ಗ್ಲಾಸ್ ಮೇಲೆ ಇಟ್ಟು, ನಿಧಾನವಾಗಿ ಒತ್ತಿ ರಸ ತೆಗೆಯಿರಿ.
4. ಗ್ಲಾಸ್‌ನಲ್ಲಿ ಬಿದ್ದಿರುವ ಬೀಜಗಳನ್ನು ತೆಗೆಯಿರಿ.
5. ಸ್ವಲ್ಪ ನೀರು, ಕಡಿಮೆ ಸಕ್ಕರೆ ಮತ್ತು ಒಂದು ಚಿಟಿಕೆ ಉಪ್ಪು ಜೋಡಿಸಿರಿ.
6. ಸಕ್ಕರೆ ಚೆನ್ನಾಗಿ ಕರಗುವವರೆಗೆ ಚಮಚದಿಂದ ಕಲಿಸಬೇಕು.

ಈಗ ತಾಜಾ ನಿಂಬೆರಸ ಕುಡಿಯುವುದಕ್ಕೆ ಸಿದ್ಧವಾಗಿದೆ.

ವಿವಿಧ ವಯಸ್ಸಿನವರು ತೆಗೆದುಕೊಳ್ಳುವ ಆಹಾರ :

ಕೆಲವರಿಗೆ ಪ್ರತ್ಯೇಕವಾದ ಆಹಾರ ಆಗತ್ಯ ಏಕೆಂದರೆ, ಅವರ ದೇಹಕ್ಕೆ ಹೆಚ್ಚು ರಕ್ಷಣೆ ಅವಸರ ಇರುತ್ತದೆ. ಇವರಲ್ಲಿ ಚಿಕ್ಕ ಮಕ್ಕಳು ಮತ್ತು ಮುದುಕರು ಕೂಡಾ ಇರುತ್ತಾರೆ.

ಚಿಕ್ಕ ಮಕ್ಕಳಿಗೆ ಹಲ್ಲುಗಳು ಇರುವುದಿಲ್ಲ. ಅವರು ಆಹಾರವನ್ನು ಅಗಿಯುವುದಿಲ್ಲ. ಆದ್ದರಿಂದ ಅವರಿಗೆ ಹಾಲು ಅಥವಾ ಮೆತ್ತನೆಯ ಆಹಾರವನ್ನು ಕೊಡುತ್ತಾರೆ. ವಯಸ್ಸಿನವರಾಗಿರುವುದರಿಂದ ಹಲ್ಲುಗಳು ಉದುರುವುದರಿಂದ ಅಗೆಯಲಾರರು. ಅವರು ಕೂಡಾ ಮೆತ್ತನೆಯ ಆಹಾರವನ್ನು ಮಾತ್ರ ತಿನ್ನುತ್ತಾರೆ. ಆದ್ದರಿಂದ ಆಹಾರದ ಅಭ್ಯಾಸಗಳು ವಯಸ್ಸಿನ ಆಧಾರದ ಮೇಲೆ ಬದಲಾವಣೆಯಾಗುತ್ತಾ ಇರುತ್ತವೆ.


ಚಟುವಟಿಕೆ :

ನಿಮ್ಮ ಹಿರಿಯರ ಜೊತೆ ಮಾತನಾಡಿ ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿ.

ವಯಸ್ಸು	ತಿನ್ನುವವು	ತಿನ್ನದೇ ಇರುವವು
2 ವರ್ಷಗಳು		
20 ವರ್ಷಗಳು		
80 ವರ್ಷಗಳು		

ಅದ್ಭುತವಾದ ನಿಜಾಂಶಗಳು

ನಾವು ಪ್ರತಿದಿನ ತಿನ್ನುವ ಆಹಾರ ನೇರವಾಗಿ ನಮ್ಮ ತಟ್ಟೆಯಲ್ಲಿ ಬರುವುದಿಲ್ಲ. ಅದು ನಮ್ಮನ್ನು ಸೇರುವುದಕ್ಕೆ ಮುಂಚೆ ಅನೇಕ ಹಂತಗಳು ಇರುತ್ತವೆ. ಸಾಧಾರಣವಾಗಿ ಗಿಡಗಳ ಆಧಾರಿತ ಹೊಲಗಳಲ್ಲಿ ಬೆಳೆಸುತ್ತಾರೆ. ಮೊಟ್ಟೆಗಳು ಕೋಳಿ ಫಾರಂಗಳಲ್ಲಿ ಉತ್ಪತ್ತಿಯಾಗುತ್ತವೆ. ಹಾಲು ಮತ್ತು ಹಾಲಿನ ಉತ್ಪತ್ತಿಗಳು ಡೈರಿ ಫಾರಂನಲ್ಲಿ ಉತ್ಪತ್ತಿಯಾಗುತ್ತವೆ. ಇವೆಲ್ಲವುಗಳನ್ನು ಅಂಗಡಿಗಳಿಗೆ ಸರಬರಾಜು ಮಾಡಲಾಗುತ್ತದೆ. ಅಲ್ಲಿಂದ ಜನರು ಅವುಗಳನ್ನು ಕೊಂಡುಕೊಳ್ಳುತ್ತಾರೆ.





AP SCERT

Match the following

Activity :









Shop keeper

Poultry farmer

Farmer

Fisherman

© NCERT

Let Us Know !

Our Mid-day meal :

In school, we get a mid-day meal. It gives us healthy food like rice, dhal, vegetables, eggs, chikki and raagi java. These foods help us grow properly and concentrate better. Mid-day meals make sure every child gets at least one nutritious meal every day.

We should know that food is an important part of our life. It keeps us fit and healthy. So, we should eat healthy food.



ಹೊಂದಿಸಿ ಬರೆಯಿರಿ

ಚಟುವಟಿಕೆ :



ಅಂಗಡಿಯವನು



ಕೋಳಿ ಸಾಕಾಣಿಕೆದಾರ



ರೈತ



ಮೀನು ಹಿಡಿಯುವವರು



ತಿಳಿದು ಕೊಳ್ಳೋಣ

ನಮ್ಮ ಮಧ್ಯಾಹ್ನದ ಊಟ :



ಪಾಠಶಾಲೆಯಲ್ಲಿ ನಮಗೆ ಮಧ್ಯಾಹ್ನದ ಊಟ ಲಭಿಸುತ್ತದೆ. ಇದರಲ್ಲಿ ಅನ್ನ, ಬೇಳೆ, ತರಕಾರಿಗಳು, ಮೊಟ್ಟೆಗಳು, ಚಿಕ್ಕಿ ಮತ್ತು ರಾಗಿಗಂಜಿಗಳಂತಹ ಆರೋಗ್ಯಕರವಾದ ಆಹಾರವನ್ನು ಕೊಡುತ್ತಾರೆ. ಈ ಆಹಾರ ನಾವು ಸರಿಯಾಗಿ ಬೆಳೆಯುವುದಕ್ಕೆ ಮತ್ತು ಪಾಠಗಳ ಮೇಲೆ ಗಮನ ಕೊಡುವುದಕ್ಕೆ ಸಹಾಯ ಮಾಡುತ್ತದೆ. ಪ್ರತಿ ಮಗುವಿಗೆ ಪ್ರತಿದಿನ ಕನಿಷ್ಠ ಒಂದು ಒಪ್ಪತ್ತಾದರೂ ಪೌಷ್ಟಿಕಾಂಶದ ಆಹಾರ ಸಿಗುವಂತೆ ಮಧ್ಯಾಹ್ನ ಬಿಸಿಯೂಟದ ಯೋಜನೆ ಸೂಚಿಸುತ್ತದೆ.

ಆಹಾರವು ನಮ್ಮ ಜೀವನದಲ್ಲಿ ಒಂದು ಮುಖ್ಯವಾದ ಭಾಗವೆಂದು ನಾವು ತಿಳಿದುಕೊಳ್ಳಬೇಕು. ಇದು ನಮ್ಮನ್ನು ದೃಢವಾಗಿ ಮತ್ತು ಆರೋಗ್ಯಕರವಾಗಿಸುತ್ತದೆ. ಅದಕ್ಕಾಗಿ ನಾವು ಯಾವಾಗಲೂ ಆರೋಗ್ಯಕರವಾದ ಆಹಾರವನ್ನೇ ತೆಗೆದುಕೊಳ್ಳಬೇಕು.

© KSCERT

Shubh Dhin Bhojan

Shub dhin bhojan or Thidhi bhojan is an innovative community participation programme that complements the Mid Day Meal scheme. Under this programme, the local commu - nity voluntarily provides nutritious food items or a complete meal for the students on special occasions like festivals, birthdays, anniversaries, marriages, and days of national importance. This shows the love and care of the community towards the students.



Key Words

raw food, cooked food, digestion, healthy habits, community, nutritious.



What we have learnt ?

- Food is essential to live and work. Birds and animals too need food.
- Different foods are needed for different age groups.
- We get food from plants and animals.
- We eat leaves, stems, flowers, fruits, seeds and roots of different plants as our food.
- We get milk, meat and eggs from animals.
- We cook different food items in different methods using different utensils.



Improve Your Learning

1. Why do all living things need food?
2. Name two food items we get from plants.
3. Write the name of one food item eaten raw.
4. Explain the difference between food from plants and food from animals.

APSCERT

ಶುಭ್ ದಿನ್ ಭೋಜನ :

ಶುಭ್ ದಿನ್ ಭೋಜನ ಅಥವಾ ತಿಥಿ ಭೋಜನ ಎನ್ನುವುದು ಮಧ್ಯಾಹ್ನ ಭೋಜನ ಯೋಜನೆಗೆ ಹೆಚ್ಚುವರಿಯಾಗಿ ಜಾರಿಗೊಳಿಸುತ್ತಿರುವ ವಿಶೇಷವಾದ ಸಾಮಾಜಿಕ ಭಾಗವಹಿಸುವ ಕಾರ್ಯಕ್ರಮ, ಈ ಕಾರ್ಯಕ್ರಮದ ಕೆಳಗೆ ಹಬ್ಬಗಳು, ಹುಟ್ಟು ಹಬ್ಬಗಳು, ವಾರ್ಷಿಕೋತ್ಸವಗಳು, ಮದುವೆಗಳು ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ದಿನಗಳಂತಹ ವಿಶೇಷ ಸಂದರ್ಭಗಳಲ್ಲಿ ಸ್ಥಳೀಯ ಸಮಾಜವು ಸ್ವಚ್ಛಂದವಾಗಿ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರವನ್ನು ಅಥವಾ ಪೂರ್ಣ ಭೋಜನವನ್ನು ಒದಗಿಸುತ್ತದೆ. ಇದು ವಿದ್ಯಾರ್ಥಿಗಳ ಮೇಲೆ ಸಮಾಜಕ್ಕೆ ಇರುವ ಪ್ರೀತಿ ಮತ್ತು ಶ್ರದ್ಧೆಯನ್ನು ತಿಳಿಸುತ್ತದೆ.



ಪ್ರಮುಖ ಪದಗಳು

ಬೇಯಿಸಿದ ಆಹಾರ, ಬೇಯಿಸಿದ ಆಹಾರ, ಜೀರ್ಣ, ಆರೋಗ್ಯಕರವಾದ ಅಭ್ಯಾಸಗಳು, ಸಮಾಜ, ಪೋಷಕಯುಕ್ತ ಅಭ್ಯಾಸಗಳು



ನಾವು ಏನು ಕಲಿತಿದ್ದೇವೆ

- ನಾವು ಜೀವಿಸಲು, ಕೆಲಸ ಮಾಡಲು ಆಹಾರ ಅಗತ್ಯ, ಪ್ರಾಣಿಗಳಿಂದ ಕೂಡ ಅಹಾರ ಅವಶ್ಯಕ.
- ವಿವಿಧ ವಯಸ್ಸಿನವರಿಗೆ ವಿವಿಧ ರೀತಿಯ ಆಹಾರ ಅವಶ್ಯಕ.
- ಸಸ್ಯಗಳಿಂದ, ಪ್ರಾಣಿಗಳಿಂದ ನಾವು ಆಹಾರವನ್ನು ಪಡೆಯುತ್ತೇವೆ.
- ಅನೇಕ ರೀತಿಯ ಸಸ್ಯಗಳ ಎಲೆಗಳು, ಕಾಂಡ, ಹೂ, ಹಣ್ಣು, ಬೀಜಗಳು ಮತ್ತು ಬೇರುಗಳನ್ನು ನಾವು ಆಹಾರವಾಗಿ ಬಳಸುತ್ತೇವೆ
- ಪ್ರಾಣಿಗಳು ಮತ್ತು ಪಕ್ಷಿಗಳಿಂದ ಹಾಲು, ಮಾಂಸ ಮತ್ತು ಮೊಟ್ಟೆ ಸಿಗುತ್ತದೆ.
- ಅನೇಕ ಬಗೆಯ ಆಹಾರಗಳನ್ನು ತಯಾರಿಸಲು ಪಾತ್ರೆಗಳು ಮತ್ತು ತಯಾರಿ ವಿಧಾನಗಳನ್ನು ಅನುಸರಿಸುತ್ತೇವೆ.



ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1. ಎಲ್ಲಾ ಜೀವಿಗಳಿಗೆ ಆಹಾರ ಏಕೆ ಅಗತ್ಯ?
2. ಸಸ್ಯಗಳಿಂದ ಲಭಿಸುವ ಎರಡು ಆಹಾರ ಪದಾರ್ಥಗಳ ಹೆಸರುಗಳನ್ನು ಬರೆಯಿರಿ.
3. ಹಸಿಯಾಗಿ ತಿನ್ನುವ ಒಂದು ಆಹಾರ ಪದಾರ್ಥದ ಹೆಸರು ಬರೆಯಿರಿ.
4. ಸಸ್ಯಗಳಿಂದ ಸಿಗುವ ಆಹಾರ ಮತ್ತು ಪ್ರಾಣಿಗಳಿಂದ ಸಿಗುವ ಆಹಾರಗಳ ನಡುವೆ ಇರುವ ವ್ಯತ್ಯಾಸವನ್ನು ವಿವರಿಸಿರಿ.

APSCERT


5. Why should some foods be cooked before eating?
6. What are good food habits? Explain with one example.
7. Why should we eat different varieties of food?
8. Rani eats rice, vegetables, and fruits every day. What does this tell about her food habit? ( )

   A) Bad habit B) Good habit

   C) Lazy habit D) Wrong habit
9. After playing, you want to eat food. What good habit should you follow before eating?
10. Match the following:

Food Item	**Source**
Milk	Bird
Rice	Tree
Egg	Animal
Mango	Plant

11. Group the following foods : Carrot, Rice, Apple, Chapati
    - Eaten raw : _____
    - Must be cooked : _____
12. Is it good to eat only junk food every day?
13. Your friend wastes food on the plate. Is it right or wrong? Give one reason.
14. Draw and name four foods from plants and four foods from animals.



APSCERT

5. ಕೆಲವು ಪದಾರ್ಥಗಳನ್ನು ತಿನ್ನುವ ಮೊದಲು ಏಕೆ ಬೇಯಿಸಬೇಕು?

6. ಉತ್ತಮ ಆಹಾರ ಅಭ್ಯಾಸಗಳು ಯಾವುವು? ಒಂದು ಉದಾಹರಣೆಯಿಂದ ವಿವರಿಸಿರಿ.

7. ನಾವು ಏಕೆ ವಿಧವಿಧವಾದ ಆಹಾರಗಳನ್ನು ತೆಗೆದುಕೊಳ್ಳಬೇಕು?

8. ರಾಣಿ ಪ್ರತಿದಿನ ಅನ್ನ, ತರಕಾರಿಗಳು ಮತ್ತು ಹಣ್ಣುಗಳನ್ನು ತಿನ್ನುತ್ತಾರೆ. ಇದು ಅವಳ ಆಹಾರ ಅಭ್ಯಾಸದ ಕುರಿತು ಏನು ಹೇಳುತ್ತದೆ? ( )

ಎ) ಕೆಟ್ಟ ಅಭ್ಯಾಸ　　ಬಿ) ಉತ್ತಮ ಅಭ್ಯಾಸ

ಸಿ) ಸೋಮಾರಿ ಅಭ್ಯಾಸ　　ಡಿ) ತಪ್ಪು ಅಭ್ಯಾಸ.

9. ಆಟ ಆಡಿದ ನಂತರ ನೀವು ಆಹಾರ ತಿನ್ನಬೇಕೆಂದುಕೊಂಡಿದ್ದೀರಿ. ತಿನ್ನುವ ಮೊದಲು ಯಾವ ಉತ್ತಮ ಅಭ್ಯಾಸವನ್ನು ಪಾಲಿಸಬೇಕು?

10. **ಸರಿ ಹೊಂದಿಸಿರಿ:**

ಆಹಾರ ಪದಾರ್ಥಗಳು	**ಆಧಾರ**
ಹಾಲು	ಪಕ್ಷಿ
ಅಕ್ಕಿ	ಮರ
ಮೊಟ್ಟೆ	ಪ್ರಾಣಿ
ಮಾವಿನಹಣ್ಣು	ಸಸ್ಯ

11. ಈ ಕೆಳಗಿನ ಆಹಾರಗಳನ್ನು ವರ್ಗೀಕರಿಸಿರಿ : ಕ್ಯಾರೆಟ್, ಅಕ್ಕಿ, ಸೇಬು, ಚಪಾತಿ.

ಬೇಯಿಸದೇ ತಿನ್ನುವವು : _____

ಬೇಯಿಸಿ ತಿನ್ನುವವು : _____

12. ಪ್ರತಿದಿನ ಅಸ್ವಾಸ್ಥ್ಯ ಆಹಾರ ಮಾತ್ರ ತಿನ್ನುವುದರಿಂದ ಉತ್ತಮವೇ?

13. ನಿಮ್ಮ ಸ್ನೇಹಿತ ತಟ್ಟೆಯಲ್ಲಿ ಆಹಾರವನ್ನು ವ್ಯರ್ಥ ಮಾಡುತಿದ್ದಾನೆ. ಅದು ಸರಿಯೇ ಅಥವಾ ತಪ್ಪೇ? ಒಂದು ಕಾರಣ ಹೇಳಿರಿ.

14. ಸಸ್ಯಗಳಿಂದ ಮತ್ತು ಪ್ರಾಣಿಗಳಿಂದ ಬರುವ ನಾಲ್ಕು ಆಹಾರ ಪದಾರ್ಥಗಳ ಚಿತ್ರ ಬಿಡಿಸಿ ಅವುಗಳ ಹೆಸರುಗಳನ್ನು ಬರೆಯಿರಿ.

AP SCERT

15. Write a slogan on your own on 'Healthy food'.
16. Rishi's family is celebrating a festival today. Write the name of the festival and one traditional food they might prepare.
17. Anand eats only biscuits and soft drinks every day. Write any five healthy foods he can eat to stay healthy and write the reasons why these foods are better.

.....

.....

.....


.....

.....

.....

.....

18. Make a Concept map of different food varities you eat during festivals.



AP SCERT

15. 'ಆರೋಗ್ಯಕರವಾದ ಆಹಾರದ ಮೇಲೆ ಒಂದು ಘೋಷಣೆಯನ್ನು ತಯಾರಿಸಿರಿ.

16. ರಿಷಿ ಕುಟುಂಬ ಇಂದು ಹಬ್ಬ ಆಚರಿಸುತ್ತಿದೆ. ಆ ಹಬ್ಬದ ಹೆಸರು ಮತ್ತು ಅವರು ತಯಾರಿಸುವ ಒಂದು ಸಾಂಪ್ರದಾಯಿಕ ಆಹಾರ ಪದಾರ್ಥವನ್ನು ಬರೆಯಿರಿ.

17. ಆನಂದ್ ಪ್ರತಿದಿನ ಬಿಸ್ಕತ್ತು ಮಾತ್ರ ತಿನ್ನುತ್ತಾನೆ ಮತ್ತು ತಂಪು ಪಾನೀಯಗಳನ್ನು ಕುಡಿಯುತ್ತಾನೆ. ಆರೋಗ್ಯವಾಗಿರಲು ಅವನು ತಿನ್ನಬಹುದಾದ ಯಾವುದಾದರೂ ಐದು ಆರೋಗ್ಯಕರ ಆಹಾರಗಳನ್ನು ಬರೆದು, ಈ ಆಹಾರಗಳು ಏಕೆ ಒಳ್ಳೆಯದು ಎಂಬುದಕ್ಕೆ ಕಾರಣಗಳನ್ನು ಬರೆಯಿರಿ.

.....

.....

.....


.....

.....

.....

.....

18. ಹಬ್ಬಗಳಲ್ಲಿ ನೀವು ತಿನ್ನುವ ವಿವಿಧ ರೀತಿಯ ಆಹಾರ ಪದಾರ್ಥಗಳ ಪರಿಕಲ್ಪನಾತ್ಮಕ ಚಿತ್ರ ತಯಾರಿಸಿ.



AP SCERT



Water - A Precious Gift




Learning Outcomes

Pupils will be able to:

- Explain the importance of water. (CG-2)
- Recognize different water resources. (CG-4)
- Understand the importance of pure water. (CG-3)
- Know how water is used and misused. (CG-3)
- Know the reasons of water scarcity. (CG-4)
- Describe ways to save water. (CG-3)
- Follow water-saving methods in their daily life. (CG-4)

G8H3N7

© NCERT





ನೀರು – ಒಂದು ಅಮೂಲ್ಯ ವರ




Q6V2Q7

ಕಲಿಕಾ ಫಲಗಳು :

ವಿದ್ಯಾರ್ಥಿಗಳು ಪಡೆದುಕೊಳ್ಳುವ ಸಾಮರ್ಥ್ಯಗಳು :

- ನೀರಿನ ಪ್ರಾಮುಖ್ಯತೆ ಕುರಿತು ತಿಳಿದುಕೊಳ್ಳುತ್ತಾರೆ.(CG-2)
- ವಿವಿಧ ನೀರಿನ ಸಂಪನ್ಮೂಲಗಳನ್ನು ಗುರುತಿಸುವರು.(CG-2)
- ಸ್ವಚ್ಛವಾದ ನೀರಿನ ಅವಶ್ಯಕತೆಯನ್ನು ತಿಳಿದುಕೊಳ್ಳುತ್ತಾರೆ. (CG-4)
- ನೀರಿನ ಬಳಕೆ ಮತ್ತು ವ್ಯರ್ಥದ ತಿಳಿದುಕೊಳ್ಳುತ್ತಾರೆ.(CG-4)
- ನೀರಿನ ಕೊರತೆಗೆ ಇರುವ ಕಾರಣಗಳನ್ನು ತಿಳಿದುಕೊಳ್ಳುತ್ತಾರೆ. (CG-4)
- ನೀರನ್ನು ಉಳಿತಾಯ ಮಾಡುವ ಮಾರ್ಗಗಳನ್ನು ವಿವರಿಸುವಂತಾಗುತ್ತಾರೆ.(CG-4)
- ದೈನಂದಿನ ಜೀವನದಲ್ಲಿ ನೀರನ್ನು ಉಳಿತಾಯ ಮಾಡುವ ಮಾರ್ಗಗಳ ಕುರಿತು ತಿಳಿದುಕೊಳ್ಳುತ್ತಾರೆ. (CG-4)



© NCERT

Hai! I am the water drop. I fall from the clouds. I am very important for your life. Water is a gift of nature. You need water to live. Plants and animals also need water to live. You cannot live without water. You use water in many ways in your daily life. Do you know how I am used in your daily life? Come with me. I will tell my story on how important I am to you.

Uses of water :

Water is used for many activities in our homes.

Activity :

Children! Look at the pictures showing how we use water in our daily lives.



Brushing teeth



Drinking



Bathing



Cleaning vegetables



Washing clothes



Watering plants

APSCERT

ಹಾಯ್! ನಾನು ಮಳೆಯ ಹನಿ ನಾನು ಮೋಡಗಳಿಂದ ಜಾರಿ ಬೀಳುತ್ತೇನೆ. ನಿಮ್ಮ ಜೀವನದಲ್ಲಿ ನನಗೆ ಬಹಳ ಪ್ರಾಮುಖ್ಯತೆ ಇದೆ. ಪ್ರಕೃತಿ ಪ್ರಸಾದಿಸಿದ ವರದಾನವೇ ನೀರು, ನೀವು ಜೀವಿಸಲು ನೀರು ಅವಸರ. ಸಸ್ಯಗಳು, ಪ್ರಾಣಿಗಳು ಜೀವಿಸಲು ಸಹ ನೀರು ಅವಸರ. ನೀರಿಲ್ಲದೆ ನೀವು ಜೀವಿಸಲಾರಿರಿ. ನೀವು ನಿತ್ಯ ಜೀವನದಲ್ಲಿ ನೀರನ್ನು ಹಲವು ವಿಧವಾಗಿ ಉಪಯೋಗಿಸುತ್ತಿದ್ದೀರಿ. ನಿಮ್ಮ ನಿತ್ಯ ಜೀವನದಲ್ಲಿ ನಾನು ಹೇಗೆ ಉಪಯೋಗ ಬೀಳುತ್ತಿದ್ದೇನೆ ಎಂಬುದು ನಿಮಗೆ ಗೊತ್ತೇ? ನನ್ನ ಜೊತೆ ಬನ್ನಿ ನಾನು ನಿಮಗೆ ಎಷ್ಟು ಅವಶ್ಯಕವೋ ನನ್ನ ಕಥೆ ಹೇಳುತ್ತೇನೆ.

ನೀರಿನ ಉಪಯೋಗಳು

ನಮ್ಮ ಮನೆಯಲ್ಲಿ ಬಹಳ ವಿಧವಾದ ಕೆಲಸಗಳಿಗಾಗಿ ನಾವು ನೀರನ್ನು ಉಪಯೋಗಿಸುತ್ತೇವೆ.

ಚಟುವಟಿಕೆ :

ಮಕ್ಕಳಿರಾ ! ನಾವು ನೀರನ್ನು ಯಾವ ವಿಧವಾಗಿ ಬಳಸುತ್ತಿದ್ದೇವೋ ಈ ಕೆಳಗಿನ ಚಿತ್ರಗಳನ್ನು ನೋಡಿರಿ



ಹಲ್ಲು ಉಜ್ಜಿಕೊಳ್ಳಲು



ಕುಡಿಯಲು



ಸ್ನಾನ ಮಾಡಲು



ತರಕಾರಿಗಳನ್ನು ಸ್ವಚ್ಚಗೊಳಿಸಲು



ಬಟ್ಟೆಗಳು ಒಗೆಯಲು



ಸಸ್ಯಗಳನ್ನು ಬೆಳೆಸಲು

AP SCERT

Let us see the Pictures :



Put off Fire



Agriculture



Aquaculture



Construction

You have seen some of the uses of water. Let us know how important it is to others. Farmers can grow crops only if water is available.



Have you ever seen ponds where prawns and fishes are grown?

Sources of Water :

Where does the water in your house come from?

Does everyone in your neighbourhood get water from the same source?

Water comes from different sources. Rain is the main source of water.



Do You Know !

World Water Day is on 22nd March.

AP SCERT

ಕೆಳಗಿನ ಚಿತ್ರಗಳನ್ನು ನೋಡೋಣ :



ಬೆಂಕಿಯನ್ನು ಆರಿಸಲು।



ಕೃಷಿಗೆ



ಮೀನು ಸಾಕಾಣಿಕೆ



ಕಟ್ಟಡ ನಿರ್ಮಾಣ

ನೀವು ನೀರಿನ ಕೆಲವು ಉಪಯೋಗಗಳನ್ನು ನೋಡಿರುವಿರಿ. ಉಳಿದವುಗಳಿಗೆ ನೀರು ಎಷ್ಟು ಅತ್ಯವಸರವೋ ತಿಳಿದುಕೊಳ್ಳೋಣ. ರೈತರು ನೀರು ಲಭ್ಯವಾದಾಗ ಮಾತ್ರ ಬೆಳೆಗಳನ್ನು ಬೆಳೆಸಬಲ್ಲರು.



ನೀವು ಎಂದಾದರೂ ಮೀನು, ಸೀಗಡಿ ಮೀನು ಬೆಳೆಸುವ ಕೆರೆಗಳನ್ನು ನೋಡಿದ್ದೀರಾ?

ನೀರು ಲಭಿಸುವ ಪ್ರದೇಶಗಳು :

ನಿಮ್ಮ ಮನೆಗೆ ಬೇಕಾದ ನೀರು ಎಲ್ಲಿಂದ ಬರುತ್ತದೆ?

ನಿಮ್ಮ ನೆರೆ ಹೊರೆಯವರು ಸಹ ನೀರನ್ನು ಅದೇ ಮೂಲದಿಂದ ತಂದುಕೊಳ್ಳುತ್ತಾರೆಯೇ?

ನೀರು ವಿವಿಧ ರೀತಿಯ ಮೂಲಗಳಿಂದ ಲಭಿಸುತ್ತವೆ. ನೀರಿನ ಪ್ರಧಾನ ಸಂಪನ್ಮೂಲ ಮಳೆ.

ನಿಮಗೆ ಗೊತ್ತೇ?

ಮಾರ್ಚ್ 22 ವಿಶ್ವ ಜಲ ದಿನ

AP SCERT



Oceans, rivers, lakes, streams, ponds and springs are the natural sources of water.



Ocean




River



Lake

Dams, wells, tubewells, handpumps, canals are man-made sources of water.



Dam




Canal



Well



Hand Pump



Tubewell



Borewell

Activity :

Tick (✓) the water sources available in your village :

Source	Tick Mark
1. River	
2. Canal	
3. Well	

Source	Tick Mark
4. Tap water	
5. Bore well	
6.Tank/Pond	

© SCERT



ಸಮುದ್ರಗಳು, ನದಿಗಳು, ಸರೋವರಗಳು, ಹೊಳೆಗಳು, ಚಿಲುಮೆ
ಇವು ನೀರು ದೊರೆಯುವ ನೈಸರ್ಗಿಕ ಸಂಪನ್ಮೂಲಗಳು.



ಸಮುದ್ರ



ನದಿ



ಸರೋವರ

ಆಣೆಕಟ್ಟುಗಳು, ಬಾವಿಗಳು, ಕೊಳವೆಬಾವಿಗಳು, ಕೈಪಂಪುಗಳು, ಕಾಲುವೆಗಳು ಮಾನವ ನಿರ್ಮಿತ ಮೂಲಗಳಾಗಿವೆ.



ಆಣೆಕಟ್ಟು



ಕಾಲುವೆ



ಬಾವಿ



ಕೊಳವೆಬಾವಿ



ತೊಟ್ಟಿಬಾವಿ



ಬೋರುಬಾವಿ

ಚಟುವಟಿಕೆ.

ನಿಮ್ಮ ಗ್ರಾಮದಲ್ಲಿ ಲಭಿಸುವ ನೀರಿನ ಸಂಪನ್ಮೂಲಗಳ ಹತ್ತಿರ (3) ಗುರ್ತು ಇಡಿರಿ.

ಸಂಪನ್ಮೂಲ	ಟಿಕ್ ಮಾರ್ಕ್
1. ನದಿ	
2. ಕಾಲುವೆ	
3.ಬಾವಿ	

ಸಂಪನ್ಮೂಲ	ಟಿಕ್ ಮಾರ್ಕ್
4. ಕೊಳಾಯಿ ನೀರು	
5. ಬೋರು ಬಾವಿ	
6. ಕೆರೆ	

RSCERT

Scarcity of Water :




In many villages people get water from the village well. Some people walk very far to get water for their daily use. The wells and ponds dry up during summer and the water level in the bore wells also gets decreased. In some places people wait for the watertanker or public tap water.



© SCERT

ನೀರಿನ ಕೊರತೆ :



ಜನರು ಬಹಳ ಗ್ರಾಮಗಳಲ್ಲಿ ಬಾವಿಗಳಿಂದ ನೀರನ್ನು ತಂದುಕೊಳ್ಳುವರು. ಕೆಲವು ಜನರು ದಿನನಿತ್ಯದ ಅಗತ್ಯಗಳಿಗೆ ನೀರನ್ನು ಬಹಳ ದೂರಕ್ಕೆ ಹೋಗಿ ತಂದುಕೊಳ್ಳುತ್ತಾರೆ. ಬಾವಿಗಳು, ಕೆರೆಗಳು ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ. ಬೋರು ಬಾವಿಗಳಿಲ್ಲಿನ ನೀರು ಸಹ ಕಡಿಮೆಯಾಗುತ್ತವೆ. ಕೆಲವು ಪ್ರಾಂತಗಳಲ್ಲಿ ಜನರು ನೀರಿನ ಟ್ಯಾಂಕುಗಳು ಸಾರ್ವಜನಿಕ ಕೊಳಾಯಿಗಳಲ್ಲಿ ಬರುವ ನೀರಿಗಾಗಿ ಎದುರು ನೋಡುತ್ತಾರೆ.



© KSERT



Think and Discuss

Kamali's father said that three parts of the Earth is covered with water. We have so much of water on the earth. But her aunt says that there is shortage of water. We should save water. If we waste water the way we do right now, we will have no water to drink one day. Think why.





Can you drink water directly from all the available sources?

Protected water :

We can see water around us, but we do not drink it directly from all the sources. It may be polluted due to different activities.

Let us observe these pictures. What are they doing?





Water gets polluted due to human activities. We have to drink pure water. The government is providing pure water under the safe drinking water scheme to all the people. Do not drink unsafe water.



Do not use unsealed or water stored in bottles and packets for a long time.

The water we drink should be clean and germs free. The most common way to purify water is **boiling**. We should boil water and cool it before drinking. We can also purify water by using water filters and water purifiers. Water should be stored in clean and closed containers.

© NCERT



ಆಲೋಚಿಸಿ – ಚರ್ಚಿಸಿರಿ.

ಕಮಲಿ ಅವರ ತಂದೆ "ಭೂ ಭಾಗವು ಮೂರು ಭಾಗ ನೀರಿನಿಂದ ತುಂಬಿದೆ. ಬಹಳ ನೀರು ನಮಗೆ ಈ ಭೂಮಿಯ ಮೇಲೆ ಲಭಿಸುತ್ತಿದೆ" ಎಂದರು. ಆದರೆ ಅವರ ಅತ್ತೆಯು ನಮಗೆ ನೀರಿನ ಕೊರತೆ ಇದೆ, ನೀರು ಉಳಿತಾಯ ಮಾಡುವ ಅಗತ್ಯವಿದೆ ಎಂದು ಹೇಳಿದಳು. ಪ್ರಸ್ತುತ ನಾವು ನೀರನ್ನು ಮಾಡಿದಂತೆ ವ್ಯರ್ಥ ಮಾಡುತ್ತಾ ಹೋದರೆ ಮುಂದೊಂದು ದಿನ ಕುಡಿಯಲು ಸಹ ನೀರು ಸಿಗದ ಪರಿಸ್ಥಿತಿ ಬರುತ್ತದೆ ಎಂದಳು. ಏಕೆಂದು ಆಲೋಚಿಸಿ?





ನಮಗೆ ಸಿಗುವ ನೀರಿನ ಮೂಲಗಳಿಂದ ನೇರವಾಗಿ ಕುಡಿಯಬಲ್ಲೆವೇ?

ಸುರಕ್ಷಿತ ನೀರು :


ನಮ್ಮ ಸುತ್ತಲೂ ಇರುವ ನೀರನ್ನು ನೋಡಬಲ್ಲೆವು. ಆದರೆ ಆ ನೀರು ಲಭಿಸುವ ಪ್ರದೇಶದಿಂದ ನೀರನ್ನು ನಾವು ನೇರವಾಗಿ ಕುಡಿಯಲಾರೆವು. ಆ ನೀರು ವಿವಿಧ ಚಟುವಟಿಕೆಗಳಿಂದ ಮಲಿನಗೊಂಡಿರುತ್ತವೆ.

ಕೆಳಗಿನ ಚಿತ್ರಗಳನ್ನು ಗಮನಿಸಿ ಅದರಲ್ಲಿ ಅವರು ಏನು ಮಾಡುತ್ತಿದ್ದಾರೆ ಗಮನಿಸಿ.





ಮನುಷ್ಯರು ಮಾಡುವ ವಿವಿಧ ಚಟುವಟಿಕೆಗಳಿಂದ ನೀರು ಮಾಲಿನ್ಯಗೊಳ್ಳುತ್ತದೆ. ನಾವು ಶುದ್ಧವಾದ ನೀರನ್ನು ಕುಡಿಯಬೇಕು. ಸರ್ಕಾರವು ಸುರಕ್ಷಿತ ಕುಡಿಯುವ ನೀರಿನ ಯೋಜನೆಯ ಮೂಲಕ ಶುದ್ಧ ಕುಡಿಯುವ ನೀರನ್ನು ಜನರಿಗೆ ಒದಗಿಸುತ್ತದೆ. ಸುರಕ್ಷಿತವಲ್ಲದ ನೀರನ್ನು ಕುಡಿಯಬಾರದು.



ಸೀಲು ಹಾಕದ ಅಥವಾ ಸೀಸೆಗಳಲ್ಲಿ ಮತ್ತು ಪಾಕೆಟ್‌ನಲ್ಲಿ ಬಹಳ ಕಾಲದವರೆಗೆ ಸಂಗ್ರಹಿಸಿದ ನೀರನ್ನು ಬಳಸಬಾರದು.

ನಾವು ಕುಡಿಯುವ ನೀರು ಶುದ್ಧವಾಗಿಯೂ, ಹಾನಿಕಾರಕ ಸೂಕ್ಷ್ಮಜೀವಿಗಳು ಇಲ್ಲದಂತೆ ಇರಬೇಕು. ನೀರನ್ನು ಶುದ್ಧಿ ಮಾಡಲು ಅತ್ಯಂತ ಸಾಮಾನ್ಯ ಪದ್ಧತಿ **ಕುದಿಸುವುದು**. ಕುಡಿಯುವ ಮೊದಲು ನೀರನ್ನು ತಂಪಾಗಿಸಬೇಕು. ನೀರನ್ನು ಶುದ್ಧಿ ಮಾಡುವ ಸಾಧನಗಳು, ನೀರು ಸೋಸುವಿಕೆ ಉಪಕರಣಗಳ ಮೂಲಕ ಸಹ ನೀರನ್ನು ಶುದ್ಧೀಕರಿಸಬಹುದು. ನೀರನ್ನು ಸ್ವಚ್ಛಗೊಳಿಸಿದ ಮುಚ್ಚಲ್ಪಡುವ ಪಾತ್ರೆಗಳಲ್ಲಿ ನೀರನ್ನು ಸಂಗ್ರಹಿಸಬೇಕು.

© NCERT

Activity :

Draw a picture of water storage vessels at your home.

Walk around and observe the drawings by your classmates.

Let Us Know !



Till date, we heard about an assembly bell, class bell and break bell. But there is a special bell that rings three times a day, that is **'Waterbell'** which aims at encouraging students to drink sufficient water during the day to stay hydrated and fit.



Most of us use water bottles to drink water.

Why should we clean water bottles frequently? Because, disease causing germs may develop in the bottle. If we use such bottles or vessels, we may fall sick. So, water bottle should be cleaned with salt water regularly.

Activity :

Observe and do the process of cleaning a bottle.

Put a pinch of salt in the water bottle, pour some warm water and clean it with a bottle brush.





Wastage of water :



My dear children, I want to say something important. Water is very precious. Please do not waste water. Do you know what happens if you waste water?

APSCERT

ಚಟುವಟಿಕೆ :

ನಿಮ್ಮ ಮನೆಯಲ್ಲಿ ಇರುವ ನೀರನ್ನು ಸಂಗ್ರಹ ಮಾಡುವ ಪಾತ್ರೆಗಳ ಚಿತ್ರಗಳನ್ನು ಬಿಡಿಸಿರಿ.
ನಿಮ್ಮ ಸಹ ವಿದ್ಯಾರ್ಥಿಗಳು ಬಿಡಿಸಿದ ಚಿತ್ರಗಳನ್ನೂ ಸಹ ಪರಿಶೀಲಿಸಿರಿ.



ತಿಳಿದು ಕೊಳ್ಳೋಣ



ಇಲ್ಲಿಯ ತನಕ ನಾವು ಪ್ರಾರ್ಥನೆ ಗಂಟೆ, ತರಗತಿಯ ಪಿರಿಯಡ್ ಗಂಟೆ, ವಿರಾಮದ ಗಂಟೆ ಕೇಳಿರುತ್ತೇವೆ. ಆದರೆ ಪ್ರಸ್ತುತ ನಮ್ಮ ಆಂಧ್ರಪ್ರದೇಶದ ಸರ್ಕಾರದವರು ಒಂದು ಪ್ರತ್ಯೇಕವಾದ ಗಂಟೆಯನ್ನು ಪರಿಚಯ ಮಾಡಿದ್ದಾರೆ. ಅದೇ **'ನೀರಿನ ಗಂಟೆ'** ಇದು ದಿನಕ್ಕೆ ಮೂರು ಬಾರಿ ಹೊಡೆದುಕೊಳ್ಳುತ್ತದೆ. ಇದರ ಉದ್ದೇಶ ವಿದ್ಯಾರ್ಥಿಗಳನ್ನು ಅಗತ್ಯವಾದಷ್ಟು ನೀರನ್ನು ಕುಡಿಯುವಂತೆ ಮಾಡುವುದೇ, ತದನಂತರ ವಿದ್ಯಾರ್ಥಿಗಳು ನಿರ್ಜಲೀಕರಣಕ್ಕೆ ಒಳಗಾಗದಂತೆ ನೋಡುವುದು ಮತ್ತು ಆರೋಗ್ಯವಾಗಿ ಇರುವುದು.




ನಮ್ಮಲ್ಲಿ ಬಹಳ ಜನ ನೀರು ಕುಡಿಯಲು ನೀರಿನ ಬಾಟಲ್‌ಗಳನ್ನು ಬಳಸುತ್ತಾರೆ.

ನಾವು ಏಕೆ ಆಗಾಗ್ಗೆ ನೀರಿನ ಬಾಟಲ್‌ಗಳನ್ನು ಸ್ವಚ್ಛಗೊಳಿಸಬೇಕು? ಏಕೆಂದರೆ ರೋಗಕಾರಕ ಕ್ರಿಮಿಗಳು ಆ ಬಾಟಲ್ಸ್‌ನಲ್ಲಿ ವೃದ್ಧಿಯಾಗಬಹುದು. ಅಂತಹ ಬಾಟಲ್ಸ್ ಅಥವಾ ಪಾತ್ರೆಗಳನ್ನು ಬಳಸಿದರೆ ನಾವು ಅನಾರೋಗ್ಯಕ್ಕೆ ಗುರಿಯಾಗುತ್ತೇವೆ. ಅದಕ್ಕಾಗಿ ನೀರಿನ ಬಾಟಲ್ಸ್‌ಗಳನ್ನು ಆಗಾಗ್ಗೆ ಉಪ್ಪು ನೀರಿನಿಂದ ಸ್ವಚ್ಛಗೊಳಿಸಬೇಕು.

ಚಟುವಟಿಕೆ :

ನೀರಿನ ಬಾಟಲಿಯನ್ನು ಸ್ವಚ್ಛಗೊಳಿಸುವ ಪ್ರಕ್ರಿಯೆಯನ್ನು ಗಮನಿಸಿ ಅದೇ ವಿಧವಾಗಿ ನೀವು ಮಾಡಿರಿ.
ನೀರಿನ ಬಾಟಲ್‌ಗಳನ್ನು ತೆಗೆದುಕೊಂಡು ಅದರಲ್ಲಿ ಚಿಟಿಕೆಯಷ್ಟು ಉಪ್ಪನ್ನು ಹಾಕಿ. ಸ್ವಲ್ಪ ಬಿಸಿನೀರು ಹಾಕಿ ಚಿತ್ರದಲ್ಲಿ ತೋರಿಸಿದಂತೆ ಬ್ರಷ್‌ನಿಂದ ಸ್ವಚ್ಛಗೊಳಿಸಿರಿ.





ನೀರಿನ ವ್ಯರ್ಥ :



ಮಕ್ಕಳೇ ನಿಮಗೆ ಮತ್ತೊಂದು ಮುಖ್ಯವಾದ ವಿಷಯವನ್ನು ಹೇಳಲು ಬಯಸುತ್ತೇನೆ, ನೀರು ಬಹಳ ಅಮೂಲ್ಯವಾದದ್ದು. ನೀರನ್ನು ವ್ಯರ್ಥಮಾಡಬೇಡಿ. ನೀರನ್ನು ವ್ಯರ್ಥ ಮಾಡಿದರೆ ಏನಾಗುತ್ತದಯೋ ನಿಮಗೆ ಗೊತ್ತೇ ?

AP SCERT

Let us observe the following pictures.









Think and Discuss

Rama noticed water over flowing and getting wasted from a tap in her school wash area. Discuss the immediate steps Rama should take.

How to save water?



Suma's family follows some steps at home to save water.

- Use a small glass to drink water.
- Wash fruits and vegetables in a bowl of water and not under running tap water.
- Never allow water to overflow from the bucket.
- Turn off the taps immediately after using water for brushing, washing clothes, taking bath etc.
- Check the pipes for leaks.
- Turn off the motor when the tank is full.
- Create awareness on not to waste water.
- Put up slogans on wastage of water.
- They will not allow water to overflow.
- They will turn off the tap before water overflows.



AP SCERT

ಕೆಳಗಿನ ಚಿತ್ರಗಳನ್ನು ಗಮನಿಸೋಣ.









ಆಲೋಚಿಸಿ – ಚರ್ಚಿಸಿರಿ.

ರಮಾ ತನ್ನ ಶಾಲೆ ವಾಷ್ ಏರಿಯಾದಲ್ಲಿ ಕೊಳಾಯಿ ನೀರು ವ್ಯರ್ಥವಾಗಿ ಹೋಗುತ್ತಿರುವುದನ್ನು ಗಮನಿಸಿದಳು ರಮಾ ತಕ್ಷಣ ಏನು ಮಾಡಬೇಕು ಚರ್ಚಿಸಿರಿ.

ನೀರನ್ನು ಹೇಗೆ ಉಳಿತಾಯ ಮಾಡಬೇಕು ?



ಸುಮಾಳ ಕುಟುಂಬವು ಅವಳ ಮನೆಯಲ್ಲಿ ನೀರನ್ನು ಉಳಿತಾಯ ಮಾಡಲು ಕೆಲವು ಪದ್ಧತಿಗಳನ್ನು ಪಾಲಿಸುತ್ತಿದ್ದಾರೆ.

- ಕುಡಿಯಲು ಚಿಕ್ಕ ಲೋಟವನ್ನು ಉಪಯೋಗಿಸುತ್ತಾರೆ.
- ಒಂದು ಪಾತ್ರೆಯಲ್ಲಿ ನೀರು ಹಾಕಿ ಹಣ್ಣುಗಳನ್ನು ತರಕಾರಿಗಳನ್ನು ತೊಳೆಯುತ್ತಾರೆ ಹರಿಯುವ ಕೊಳಾಯಿ ನೀರಿನ ಕೆಳಗೆ ತೊಳೆದು ನೀರನ್ನು ವ್ಯರ್ಥ ಮಾಡುವುದಿಲ್ಲ.
- ಬಕೆಟ್ ತುಂಬಿ ನೀರು ಹರಿಯುವಂತೆ ಮಾಡುವುದಿಲ್ಲ.
- ಹಲ್ಲು ಉಜ್ಜುವಾಗ, ಬಟ್ಟೆಗಳನ್ನು ತೊಳೆಯುವಾಗ, ಸ್ನಾನ ಮಾಡುವಾಗ ನೀರನ್ನು ಬಳಸಿದ ತಕ್ಷಣ ಕೊಳಾಯಿ ಆಫ್ ಮಾಡುತ್ತಾರೆ.
- ಕೊಳವೆಗಳು, ಸಾಕೆಟ್‌ಗಳು ಸೋರದಂತೆ ಆಗಾಗ್ಗೆ ತನಿಖೆ ಮಾಡುತ್ತಿರುತ್ತಾರೆ.
- ನೀರಿನ ಟ್ಯಾಂಕ್ ತುಂಬಿದ ಕೂಡಲೇ ವಿದ್ಯುತ್ ಮೋಟಾರ್ ಅನ್ನು ಆಫ್ ಮಾಡುತ್ತಾರೆ.
- ನೀರನ್ನು ವ್ಯರ್ಥ ಮಾಡಬಾರದೆಂದು ಅರಿವು ಮೂಡಿಸುತ್ತಾರೆ.
- ನೀರನ್ನು ವ್ಯರ್ಥ ಮಾಡಬಾರದೆಂದು ಘೋಷಣೆಗಳನ್ನು ಬರೆದು ಪ್ರದರ್ಶಿಸುತ್ತಾರೆ.



- ನೀರು ಪಾತ್ರೆಗಳ ಮೇಲೆ ತುಂಬಿ ಹರಿಯಲು ಬಿಡುವುದಿಲ್ಲ.
- ಪಾತ್ರೆಗಳು ತುಂಬಿ ನೀರು ಹರಿಯುವ ಮುಂಚೆಯೇ ಕೊಳಾಯಿ ಆಫ್ ಮಾಡುತ್ತಾರೆ.

APSCERT

Key Words

water resources, protected water, irrigation, stored water, scarcity, water tanker, aquaculture, agriculture.

What we have learnt ?

- We use water in many ways in our day - to - day life.
- Rain is the main source of water.
- Oceans, rivers, lakes, streams, ponds and springs are natural sources of water.
- Dams, wells, tubewells, hand pumps and canals are man-made sources of water.
- Water gets polluted due to human activities.
- We have to drink clean water only.
- We should not waste water.



Improve Your Learning

1. Why do we need water?
2. Name any two water resources.
3. Write one use of water at home.
4. What happens when there is less water available?
5. Why is water called a precious resource?
6. After washing hands. What should you do immediately? ( )

   A) Ignore it B) Close the tap

   C) Call a friend D) Walk away

AP SCERT

ಪ್ರಮುಖ ಪದಗಳು

ನೀರಿನ ಮೂಲಗಳು, ಸುರಕ್ಷಿತ ನೀರು, ನೀರಾವರಿ, ಸಂಗ್ರಹಿಸಿದ ನೀರು, ನೀರಿನ ಕೊರತೆ, ನೀರಿನ ಟ್ಯಾಂಕರ್, ಮೀನು ಸಾಕಾಣಿಕೆ, ಕೃಷಿ

ನಾವು ಏನು ಕಲಿತೆವು ?

- ನಾವು ದಿನನಿತ್ಯದ ಜೀವನದಲ್ಲಿ ನೀರನ್ನು ಅನೇಕ ವಿಧವಾಗಿ ಉಪಯೋಗಿಸುತ್ತಿದ್ದೇವೆ.
- ಮಳೆಯು ಪ್ರಮುಖ ನೀರಿನ ಮೂಲ.
- ಸಮುದ್ರಗಳು, ನದಿಗಳು, ಸರೋವರಗಳು, ಕೆರೆ, ಕೊಳಗಳು, ನೀರಿನ ಬುಗ್ಗೆಗಳು ನೀರಿನ ನೈಸರ್ಗಿಕ ಮೂಲಗಳು.
- ಆಣೆಕಟ್ಟುಗಳು, ಬಾವಿಗಳು, ಕೊಳವೆಬಾವಿ, ಕೈ ಪಂಪು ಮತ್ತು ಕಾಲುವೆಗಳು ಮಾನವ ನಿರ್ಮಿತ ನೀರಿನ ಮೂಲಗಳು.
- ಮಾನವನ ಚಟುವಟಿಕೆಗಳಿಂದ ನೀರು ಮಲಿನಗೊಳ್ಳುತ್ತದೆ.
- ನಾವು ಸ್ವಚ್ಛವಾದ ನೀರನ್ನು ಮಾತ್ರ ಕುಡಿಯಬೇಕು.
- ನೀರನ್ನು ವ್ಯರ್ಥ ಮಾಡಬಾರದು.

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1. ನಮಗೆ ನೀರು ಏಕೆ ಅಗತ್ಯ ?
2. ಯಾವುದಾದರೂ ಎರಡು ನೀರಿನ ಮೂಲಗಳ ಹೆಸರುಗಳನ್ನು ಹೇಳಿರಿ.
3. ಮನೆಯಲ್ಲಿ ನೀರನ್ನು ಉಪಯೋಗಿಸುವ ಒಂದು ಪದ್ಧತಿಯನ್ನು ಬರೆಯಿರಿ.
4. ನೀರು ಕಡಿಮೆ ಲಭ್ಯತೆ ಇರುವಾಗ ಏನು ಸಂಭವಿಸುತ್ತದೆ?
5. ನೀರನ್ನು ಅಮೂಲ್ಯ ಸಂಪನ್ಮೂಲ ಎಂದು ಏಕೆ ಹೇಳುತ್ತಾರೆ?
6. ಕೈ ತೊಳೆದುಕೊಂಡ ತಕ್ಷಣ ನೀವು ಏನು ಮಾಡಬೇಕು ? ( )

   ಎ) ಹಿಡಿಸಿಕೊಳ್ಳದೇ ಇರುವುದು ಬಿ) ಕೊಳಾಯಿ ಆಫ್ ಮಾಡುವುದು

   ಸಿ) ಒಬ್ಬ ಸ್ನೇಹಿತನನ್ನು ಕರೆಯುವುದು ಡಿ) ಅಲ್ಲಿಂದ ಹೊರಟು ಹೋಗುವುದು.

AP SCERT

7. Pictures of mudpot, over head tank, mudpot covered with cloth, plastic pot are given below.






Circle(◯) the vessels used to store drinking water at home.

Tick (✓) the vessel that keeps water cool naturally.

Put a cross (✗) on the vessel that is not good for storing water for many days.

Match the vessel with its place of use:

a) Clay pot	1) Terrace
b) Overhead tank	2) Kitchen

8. Naresh leaves the tap open while brushing his teeth. Is he doing the right thing? Give one reason for your answer.

9. Why should everyone be worried about water scarcity?

10. What questions would you ask your parents to know about the water sources in the olden days?

    1.

    2.

    3.

AP SCERT

7. ಮಣ್ಣಿನ ಮಡಿಕೆ, ಮನೆಯ ಮೇಲ್ಚಾವಣಿಯ ಮೇಲಿನ ಓವರ್ ಹೆಡ್‌ಟ್ಯಾಂಕ್, ಬಟ್ಟೆಯಿಂದ ಸುತ್ತಿದ ಮಣ್ಣಿನ ಮಡಿಕೆ, ಪ್ಲಾಸ್ಟಿಕ್ ಬಿಂದಿಗೆ ಈ ಚಿತ್ರಗಳನ್ನು ನೀಡಲಾಗಿದೆ.






ಮನೆಯಲ್ಲಿ ನೀರನ್ನು ಸಂಗ್ರಹಿಸಿಕೊಳ್ಳಲು ಉಪಯೋಗವಾಗುವ ಪಾತ್ರೆಗಳಿಗೆ ಸೊನ್ನೆ (◯) ಸುತ್ತಿರಿ.

ನೀರನ್ನು ಸಹಜವಾಗಿ ತಣ್ಣಗೆ ಮಾಡುವ ಪಾತ್ರೆಗಳಿಗೆ ಟಿಕ್ (3) ಹಾಕಿರಿ.

ಬಹಳ ದಿನಗಳವರೆಗೆ ನೀರನ್ನು ಸಂಗ್ರಹಿಸಿಡುವುದು ಒಳ್ಳೆಯದಲ್ಲ ಅಂತಹ ಪಾತ್ರೆಗಳಿಗೆ ಕ್ರಾಸ್ (5) ಇಡಿ.

ಪಾತ್ರೆಯನ್ನು ಉಪಯೋಗಿಸುವ ಪ್ರದೇಶದೊಂದಿಗೆ ಹೊಂದಿಸಿರಿ :

ಎ) ಮಣ್ಣಿನ ಮಡಿಕೆ	1) ಮೇಲ್ಚಾವಣಿಯ ಮೇಲೆ
ಬಿ) ಓವರ್ ಹೆಡ್ ಟ್ಯಾಂಕ್	2) ಅಡುಗೆಮನೆ

8. ನರೇಶ್ ಹಲ್ಲು ಉಜ್ಜುವವರೆಗೂ ಕೊಳಾಯಿಯನ್ನು ಆನ್‌ನಲ್ಲಿ ಇರಿಸಿದ್ದಾನೆ. ಆತನು ಸರಿಯಾದ ಕೆಲಸ ಮಾಡುತ್ತಿದ್ದಾನೆಯೇ? ನಮ್ಮ ಉತ್ತರಕ್ಕೆ ಒಂದು ಕಾರಣವನ್ನು ಹೇಳಿರಿ.

9. ನೀರಿನ ಕೊರತೆ ಕುರಿತು ಎಲ್ಲರೂ ಏಕೆ ಭಯ ಪಡಬೇಕು?

10. ಹಿಂದಿನ ಕಾಲದಲ್ಲಿ ನೀರಿನ ಮೂಲಗಳ ಕುರಿತು ತಿಳಿದುಕೊಳ್ಳಲು ನೀವು ನಿಮ್ಮ ತಂದೆ ತಾಯಿಗಳಿಗೆ ಯಾವ ಪ್ರಶ್ನೆಗಳನ್ನು ಕೇಳುವಿರಿ.

1.

2.

3.

AP SCERT

Mind Map

In essence, Our Wonderful World Class 3 invites children to wonder at the "wondrous" everyday world with fresh eyes, fostering love for learning, respect for relationships, and a sense of safety and belonging. As they observe and share, they begin to see themselves as active, caring members of their family, neighbourhood, and the larger natural and social world - a joyful first step toward becoming thoughtful, environmentally sensitive citizens.



© NCERT not to be republished



APSCERT

FUNDAMENTAL DUTIES

Fundamental duties: It shall be the duty of every citizen of India-

(a) to abide by the Constitution and respect its ideals and institutions, the National Flag and the National Anthem;
(b) to cherish and follow the noble ideals which inspired our national struggle for freedom;
(c) to uphold and protect the sovereignty, unity and integrity of India;
(d) to defend the country and render national service when called upon to do so;
(e) to promote harmony and the spirit of common brotherhood amongst all the people of India transcending religious, linguistic and regional or sectional diversities; to renounce practices derogatory to the dignity of women;
(f) to value and preserve the rich heritage of our composite culture;
(g) to protect and improve the natural environment including forests, lakes, rivers and wild life, and to have compassion for living creatures;
(h) to develop the scientific temper, humanism and the spirit of inquiry and reform;
(i) to safeguard public property and to abjure violence.
(j) to strive towards excellence in all spheres of individual and collective activity so that the nation constantly rises to higher levels of endeavour and achievement;
(k) who is a parent or guardian, to provide opportunities for education to his child or, as the case may be ward between the age of six and fourteen years;

- **Constitution of India,**
Part IV A (Article 51 A)

Right of Children to Free and Compulsory Education (RTE) Act, 2009

The RTE Act provides for the right of children to free and Compulsory Education to every child in the age group of 6 – 14 years which came into force from 1st April 2010 in Andhra Pradesh.

Important provisions of RTE Act

- Ensure availability of schools within the reach of the children.
- Improve School infrastructure facilities.
- Enroll children in the class appropriate to his / her age.
- Children have a right to receive special training in order to be at par with other children.
- Providing appropriate facilities for the education of children with special needs on par with other children.
- No child shall be liable to pay any kind of fee or charges or expenses which may prevent him or her from pursuing and completing the elementary education. No test for admitting the children in schools.
- No removal of name and repetition of the child in the same class.
- No child admitted in a school shall be held back in any class or expel from school till the completion of elementary education.
- No child shall be subjected to physical punishment or mental harassment.
- Admission shall not be denied or delayed on the ground that the transfer and other certificates have not been provided on time.
- Eligible candidates alone shall be appointed as teachers.
- The teaching learning process and evaluation procedures shall promote achievement of appropriate competencies.
- No board examinations shall be conducted to the children till the completion of elementary education.
- Children can continue in the schools even after 14 years until completion of elementary education.
- No discrimination and related practices towards children belonging to backward and marginalized communities.
- The curriculum and evaluation procedures must be in conformity with the values enshrined in the constitution and make the child free of fear and anxiety and help the child to express views freely.

APSCERT